# ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ:22268390, ಫ್ಯಾಕ್ಸ್:22266481
ಅಂಚೆ ಪೆಟ್ಟಿಗೆ ನಂ.5056
ಇ-ಮೇಲ್: kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ"
ಬೆಂಗಳೂರು-560 001.
ವೆಬ್ ಸೈಟ್: http://kpsc.kar.nic.in

ಸಂಖ್ಯೆ: ಪಿಎಸ್‌ಸಿ 371 ಆರ್‌ಟಿಬಿ-2/2023-24/3044 ದಿನಾಂಕ: 14-12-2023

ಇಂದ:

**ಕಾರ್ಯದರ್ಶಿ,**
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು-560001.

**"ಅತೀ ಜರೂರು"**

ಇವರಿಗೆ:

**ಸರ್ಕಾರದ ಕಾರ್ಯದರ್ಶಿ,**
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

**ವಿಷಯ:** ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಹೈದ್ರಾಬಾದ್ ಕರ್ನಾಟಕ ಮೀಸಲಾತಿಯ ದಿ:01-02-2023ರ ಸುತ್ತೋಲೆಯನ್ನು ರದ್ದುಪಡಿಸಿರುವ ಬಗ್ಗೆ.

**ಉಲ್ಲೇಖ:**
1. ಮಾನ್ಯ KSATಅರ್ಜಿ ಸಂ: 2688-2689/2023, ದಿ:08-11-2023ರ ಆದೇಶ
2. ಆಯೋಗದ ಸಭಾ ನಡವಳಿ ದಿ:05-12-2023
3. ಆಯೋಗದ ಪತ್ರ ಸಂ: ಆರ್(1) 1814/2023-24/ಪಿಎಸ್‌ಸಿ, ದಿ:11-12-2023

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಯೋಗದ ದಿ:21-02-2022 ರಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಸಹಾಯಕ ಇಂಜಿನಿಯರ್ (ಗ್ರೇಡ್-1) 229+59(ಹೈ.ಕ) ಹುದ್ದೆಗಳ ನೇಮಕಾತಿ ಸಂಬಂಧ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿದ್ದ ಅರ್ಜಿ ಸಂ:2688-2689/2023 ರ ಸಂಬಂಧ ದಿ:08-11-2023 ರಂದು ನೀಡಿರುವ ಅಂತಿಮ ಆದೇಶದ ಕುರಿತಂತೆ ಆಯೋಗವು ದಿ:05-12-2023ರ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, ಮಾನ್ಯ ನ್ಯಾಯ ಮಂಡಳಿಯ ಆದೇಶವನ್ನು ಪಾಲಿಸಿದ್ದಲ್ಲಿ ಹಲವು ನೇಮಕಾತಿ ಅಧಿಸೂಚನೆಗಳಿಗೆ ತೊಂದರೆಯಾಗುವುದರಿಂದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ತುರ್ತಾಗಿ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ನಿಯಮಗಳನ್ನು ರೂಪಿಸುವ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಮೊದಲನೇ ಪ್ರತಿವಾದಿಯಾಗಿದ್ದು, ಮಾನ್ಯ ನ್ಯಾಯ ಮಂಡಳಿಯು ರದ್ದುಪಡಿಸಿರುವ ಆದೇಶದ ಕುರಿತಂತೆ ಸರ್ಕಾರದ ನಿಲುವು ಈ ವಿಷಯದಲ್ಲಿ ಅತೀ ಮುಖ್ಯವಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಅತೀ ಜರೂರು ಎಂದು ಪರಿಗಣಿಸಿ ತಮ್ಮ ನಿಲುವನ್ನು ಶೀಘ್ರವಾಗಿ ತಿಳಿಸುವಂತೆ ಉಲ್ಲೇಖ(03)ರ ಪತ್ರದಲ್ಲಿ ಕೋರಲಾಗಿರುತ್ತದೆ.

ಮುಂದುವರೆದು, ಸರ್ಕಾರವು ದಿ:01-02-2023ರಂದು ಜಾರಿ ಮಾಡಿರುವ ಹೈ.ಕ. ಮೀಸಲಾತಿ ಸುತ್ತೋಲೆಯನ್ವಯ ಈ ಕೆಳಕಂಡ ವಿವಿಧ ಹುದ್ದೆಗಳ ಆಯ್ಕೆಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

| ಕ್ರ. ಸಂ. | ಇಲಾಖೆಯ ಹೆಸರು | ಹುದ್ದೆಯ ಹೆಸರು ಮತ್ತು ಸಂಖ್ಯೆ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ |
|---|---|---|---|
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | ಸಹಾಯಕ ಅಭಿಯಂತರರು 229 + 59(ಹೈ.ಕ.) | ಪಿಎಸ್‌ಸಿ 1 ಆರ್‌ಟಿಬಿ 1/2021, ದಿ:21-02-2022 |
| 2 | ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ | ನಗರ ಯೋಜಕರು 18 + 05 (ಹೈ.ಕ.) | ಪಿಎಸ್‌ಸಿ 1 ಆರ್‌ಟಿಬಿ 3/2021, ದಿ:18-03-2022 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | ಕಿರಿಯ ಅಭಿಯಂತರರು 89+47(ಹೈ.ಕ) | ಪಿಎಸ್‌ಸಿ 201 ಆರ್‌ಟಿಬಿ-2 /2021/2431 ದಿ:17-03-2022 |
| 4 | ಪೌರಾಡಳಿತ ನಿರ್ದೇಶನಾಲಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ (ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯಿತಿ) | ಕಿರಿಯ ಅಭಿಯಂತರರು(ಸಿವಿಲ್) 74 + 15 (ಹೈ.ಕ) | ಪಿಎಸ್‌ಸಿ 365 ಆರ್‌ಟಿಬಿ-2/ 2021/2452 ದಿ:19-03-2022 |
| 5 | | ಕಿರಿಯ ಆರೋಗ್ಯ ನಿರೀಕ್ಷಕರು 55 + 02 (ಹೈ.ಕ) | |
| 6 | ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ | ಸಹಾಯಕ ನಗರ ಯೋಜಕರು 50+10(ಹೈ.ಕ) | ಪಿಎಸ್‌ಸಿ 17 ಆರ್‌ಟಿಬಿ-2 /2022-23/215 ದಿ:22-04-2022 |

**ಮಾನ್ಯ ನ್ಯಾಯಾಲಯವು ರದ್ದುಪಡಿಸಿರುವ ದಿ:01-02-2023ರ ಹೈ.ಕ. ಮೀಸಲಾತಿಯ ಸುತ್ತೋಲೆಯನ್ನು ಜಾರಿ ಮಾಡಿರುವುದು ಸರ್ಕಾರವಾಗಿರುತ್ತದೆ. ಆದ್ದರಿಂದ ಸದರಿ ಸುತ್ತೋಲೆಯನ್ನು ಹಿಂಪಡೆಯುವ ಅಥವಾ ಮಾರ್ಪಡಿಸುವ ಅಧಿಕಾರವು ಸರ್ಕಾರದ ವ್ಯಾಪ್ತಿಗೆ ಬರುತ್ತದೆಯೇ ಹೊರತು ಆಯೋಗದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ದಿ:01-02-2023ರ ಸುತ್ತೋಲೆ ರದ್ದಾದಲ್ಲಿ ಮೇಲ್ಕಂಡ ತಃಖ್ತೆಯಲ್ಲಿ ವಿವರಿಸಿರುವ ವಿವಿಧ ಹುದ್ದೆಗಳ ನೇಮಕಾತಿಯ ಆಯ್ಕೆ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುವುದರಿಂದ ಈ ಬಗ್ಗೆ ಕೈಗೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಸೂಕ್ತ ನಿರ್ದೇಶನವನ್ನು ಅತೀ ಜರೂರಾಗಿ ನೀಡುವಂತೆ ಕೋರಿದೆ.**

ತಮ್ಮ ವಿಶ್ವಾಸಿ

ಸಹಿ/-
(ಕೆ.ಎಸ್. ಲತಾ ಕುಮಾರಿ)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.